ದಿನಾಂಕ: 25-01-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: 5, 6, 8 ನೇ ಆರೋಪಿತರ ಪರ ಶ್ರೀ. ಎ.ಸಿ.ಪಿ ವಕೀಲರಿಂದ**

ನನ್ನ ಗಂಡನ ಊರು ಕಟಾವ ಗ್ರಾಮ, ಮಿರಜ ತಾಲೂಕ, ಸಾಂಗ್ಲಿ ಜಿಲ್ಲಾ, ಮಹಾರಾಷ್ಟ್ರ ರಾಜ್ಯ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಕಳೆದ 20 ವರ್ಷಗಳಿಂದ ನನ್ನ ತವರುಮನೆಯಲ್ಲಿಯೇ ನನ್ನ ಗಂಡ ಮತ್ತು ಮಕ್ಕಳೊಂದಿಗೆ ವಾಸವಾಗಿದ್ದು ನನ್ನ ಗಂಡ 9 ವರ್ಷಗಳ ಹಿಂದೆ ಮೃತಪಟ್ಟಿರುತ್ತಾನೆ. ಚಾಸಾಃ 5 ರವರ ಗಂಡ 15-20 ವರ್ಷಗಳ ಹಿಂದೆ ಮೃತಪಟ್ಟಿರುತ್ತಾನೆ. ಚಾಸಾಃ 4 ಮತ್ತು 6 ರವರ ಗಂಡಂದಿರು ಜೀವಂತವಾಗಿರುತ್ತಾರೆ. ನಾವು ಶೆಡಬಾಳ ಪಟ್ಟಣದ ಮಾವಿನಕೇರಿ ಮಡ್ಡಿಯಲ್ಲಿ ವಾಸವಾಗಿರುತ್ತೇವೆ ಎಂದರೆ ಸರಿ. ನಮ್ಮ ಮನೆ ಶೆಡಬಾಳದಿಂದ 3 ಕಿ.ಮೀ ದೂರದಲ್ಲಿರುತ್ತದೆ. ನಮ್ಮ ಮನೆಯ ಆಜುಬಾಜು ಸಾಕಷ್ಟು ವಸತಿ ಮನೆಗಳು ಇವೆ ಎಂದರೆ ಸರಿ. ಶೆಡಬಾಳದಿಂದ ಶಿರಗುಪ್ಪಿಗೆ ಹೋಗುವ ರಸ್ತೆಯ ದಕ್ಷಿಣ ದಿಕ್ಕಿಗೆ ಮಾವಿನಕೇರಿ ಇರುತ್ತದೆ ಎಂದರೆ ಸರಿ.

2. ಈ ಪ್ರಕರಣದ 5, 6 ಮತ್ತು 8 ನೇ ಆರೋಪಿತರು ಕೋಣನಕೋಡಿ ಮಡ್ಡಿಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ಮಾವಿನಕೇರಿಯಿಂದ ಕೋಣನಕೋಡಿ ಮಡ್ಡಿ 5-6 ಕಿ.ಮೀ ಅಂತರದಲ್ಲಿರುತ್ತದೆ ಎಂದರೆ ಸರಿ. ಕಳೆದ 20 ವರ್ಷಗಳಿಂದ ಸರ್ಕಾರಿ ಜಾಗದಲ್ಲಿ ಪತ್ರಾಸ್ ಶೆಡ್ಡು ಹಾಕಿಕೊಂಡು ವಾಸವಾಗಿರುತ್ತೇವೆ. ಮಾವಿನಕೇರಿ ಶೆಡಬಾಳ ಪಂಚಾಯತಿ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿ. ಮಹಾದೇವಿ ಮಾಕಣ್ಣವರ ಶೆಡಬಾಳ ಗ್ರಾಮ ಪಂಚಾಯತಿಯ ಸದಸ್ಯಳಾಗಿದ್ದಳು ಎಂದರೆ ಸರಿ. ಮಹಾದೇವಿ ಮಾಕಣ್ಣವರ ಕ್ರಾಂತಿ ಸೇನೆ ಸಂಘ ಮಾಡಿಕೊಂಡು ಅದರ ಅಧ್ಯಕ್ಷಳಾಗಿದ್ದು ನಾವು ಆಕೆಯ ಮುಂದಾಳತ್ವದಲ್ಲಿ ಸಂಘದ ಸದಸ್ಯರಾಗಿರುತ್ತೇವೆ ಎಂದರೆ ಸರಿಯಲ್ಲ. ನನಗೆ ವಿಧವಾ ವೇತನವನ್ನು ಮಹಾದೇವಿ ಮಾಕಣ್ಣವರ ಇವರು ಮಾಡಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

3. ಈ ಪ್ರಕರಣದ 5, 6 ಮತ್ತು 8 ನೇ ಆರೋಪಿತರು ಹಾಗೂ ನಮ್ಮ ಮಧ್ಯೆ ಮೊದಲಿನಿಂದ ಯಾವುದೇ ತಂಟೆ ತಕರಾರುಗಳು ಇರಲಿಲ್ಲ ಎಂದರೆ ಸರಿ. ಮಹಾದೇವಿ ಮಾಕಣ್ಣವರ ನಮಗೆ ಸಂಬಂಧಿಕರಾಗಬೇಕು ಎಂದರೆ ಸರಿ. ಮಹಾದೇವಿ ಮಾಕಣ್ಣವರ ಸಾಕಷ್ಟು ಜನರ ಮೇಲೆ ಕೇಸ ಹಾಕಿರುತ್ತಾರೆ ಎನ್ನುವ ವಕೀಲರ ಪ್ರಶ್ನೆಗೆ ಸಾಕ್ಷಿಯು ನುಡಿಯುವುದೇನೆಂದರೆ ಸದರಿ ವಿಷಯ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮಹಾದೇವಿ ಮಾಕಣ್ಣವರ ಮತ್ತು ಈ ಪ್ರಕರಣದ 5, 6 ಮತ್ತು 8 ನೇ ಆರೋಪಿತರ ರಾಜಕೀಯ ವಿಷಯದಲ್ಲಿ ಭಿನ್ನಾಭಿಪ್ರಾಯ ಇರುವ ವಿಷಯ ನನಗೆ ಗೊತ್ತಿಲ್ಲ.

4. ನಮ್ಮ ಮನೆಯಿಂದ ಚಾಸಾಃ 7 ರವರ ಮನೆ 150-200 ಮೀಟರ ದೂರದಲ್ಲಿರುತ್ತದೆ. ಚಾಸಾಃ 7 ಮತ್ತು ನಮ್ಮ ಮನೆಯ ಮಧ್ಯೆ ಬೇರೆ ಮನೆಗಳು ಇರುತ್ತವೆ ಎಂದರೆ ಸರಿ. ಚಾಸಾಃ 7 ರವರು ನನಗೆ ಫೋನ ಮಾಡಿ ಬರಲು ಹೇಳಿಲ್ಲ. ನಾನು ಮೊದಲನೇ ಬಾರಿ ಚಾಸಾಃ 7 ರವರ ಮನೆಗೆ ಹೋದಾಗ ಈ ಪ್ರಕರಣದ 5, 6 ಮತ್ತು 8 ನೇ ಆರೋಪಿತರು ಅಲ್ಲಿ ಹಾಜರಿರಲಿಲ್ಲ ಎಂದರೆ ಸರಿ. ನಾನು ಚಾಸಾಃ 7 ರವರ ಮನೆಗೆ ಹೋದಾಗ ಆತನ ಹೆಂಡತಿ ಮನೆಯಲ್ಲಿ ಇರಲಿಲ್ಲ. ಚಿದಾನಂದ ಮತ್ತು ಆತನ ಮಕ್ಕಳನ್ನು ಊಟಕ್ಕೆ ಕರೆಯಲು ರಾತ್ರಿ 8.00 ಗಂಟೆಗೆ ಹೋಗಿದ್ದೆ ಎಂದು ನ್ಯಾಯಾಲಯದ ಮುಂದೆ ಮಾತ್ರ ಹೇಳಿದ್ದು ಪೋಲಿಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ನನ್ನ ಪಿರ್ಯಾದಿಯಲ್ಲಿ ಚಿದಾನಂದ ಇತನನ್ನು ಮಾತ್ರ ಊಟಕ್ಕೆ ಕರೆಯಲು ಹೋಗಿದ್ದೆ ಎಂದು ಹೇಳಿರುವುದಿಲ್ಲ. ಪಿರ್ಯಾದಿಯ 2 ನೇ ಪ್ಯಾರಾದಲ್ಲಿ ಚಿದಾನಂದ ----- ------------------------- ಕರೆಯಲು ಹೋದಾಗ ಎನ್ನುವ ಹೇಳಿಕೆಯ ಭಾಗವನ್ನು ನಿಡಿ-1 ಎಂದು ಗುರುತಿಸಲಾಯಿತು.

5. ಮೊದಲು ನಾನು ಪೋಲಿಸ ಠಾಣೆಗೆ ಹೋದಾಗ ಸಮಯ ರಾತ್ರಿ 9.00 ರಿಂದ 9.30 ಆಗಿತ್ತು. ನಾನು ಪಿರ್ಯಾದಿಯನ್ನು ಬರೆದುಕೊಂಡು ಹೋಗಿರಲಿಲ್ಲ ಆದರೆ ಪೋಲಿಸರಿಗೆ ಮೌಖಿಕವಾಗಿ ಪಿರ್ಯಾದಿ ಹೇಳಿದ್ದು ಅದನ್ನು ಬರೆದುಕೊಂಡಿರುತ್ತಾರೆ. ನಾನು, ಚಾಸಾಃ 7

ಹಾಗೂ ಆತನ ಮಗ ಸಂತೋಷ ಪೋಲಿಸ ಠಾಣೆಗೆ ಹೋಗಿದ್ದೇವು. ನನ್ನ ಮೌಖಿಕ ಪಿರ್ಯಾದಿಯಲ್ಲಿ ನಾನು ಮತ್ತು ನನ್ನ ಮೈದುನ ಮಾತ್ರ ಪೋಲಿಸ ಠಾಣೆಗೆ ಹೋಗಿದ್ದೇವು ಎಂದು ಹೇಳಿ ಬರೆಸಿರುವುದಿಲ್ಲ. ಸದರಿ ಭಾಗವನ್ನು ನಿಡಿ-1 ಎ ಎಂದು ಗುರುತಿಸಲಾಯಿತು.

6. ನನಗೆ ಮಹೇಶ ನಾಯಕ ಇತನು ನೀನು ಏನು ಕೇಳತೀ ನಾನು ಹೊಡೆಯುವನು ಅಂತಾ ಹೇಳಿ ನೀನೇನು ಬಿಡಸಾಕಿ ಅಂತಾ ಹೇಳಿ ನನಗೆ ಕೈಯಿಂದ ಎಡಗಡೆ ಕಪಾಳಕ್ಕೆ ಹೊಡೆದನು ಎನ್ನುವ ವಿಷಯವನ್ನು ಮೊದಲನೇ ಬಾರಿಗೆ ನ್ಯಾಯಾಲಯದಲ್ಲಿ ಹೇಳಿದ್ದು, ಸದರಿ ವಿಷಯವನ್ನು ಪೋಲಿಸರ ಮುಂದೆ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಶಿವಾನಂದ ಮತ್ತು ನನ್ನ ಮಧ್ಯೆ ಮಾತಿಗೆ ಮಾತು ಬೆಳದಿದ್ದು ಆಗ ಶಿವಾನಂದ ಇತನು ನನ್ನನ್ನು ಮನೆಯೊಳಗಡೆಯಿಂದ ಹಾದಿ ತನಕ ಎಳೆದುಕೊಂಡು ಬಂದು ಸಿಕ್ಕ ಸಿಕ್ಕ ಹಾಗೆ ಬೈದಿರುತ್ತಾನೆ ಎನ್ನುವ ವಿಷಯವನ್ನು ಮೊದಲನೇ ಬಾರಿಗೆ ನ್ಯಾಯಾಲಯದಲ್ಲಿ ಹೇಳಿದ್ದು, ಸದರಿ ವಿಷಯವನ್ನು ಪೋಲಿಸರ ಮುಂದೆ ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

7. ಎಲ್ಲಾ ಆರೋಪಿತರು ಕೈಗಳಲ್ಲಿ ಕಲ್ಲು ಮತ್ತು ಬಡಿಗೆಗಳನ್ನು ತೆಗೆದುಕೊಂಡು ಬಂದು ನೀವು ಸ್ಟೇಶನಗೆ ಹೋಗಿದ್ದಿರಿ ನಿಮ್ಮನ್ನು ಬಡೆಯುತ್ತೇವೆ ಹೊಡೆಯುತ್ತೇವೆ ಅನ್ನುತ್ತಿದ್ದರು ಎನ್ನುವ ವಿಷಯವನ್ನು ಮೊದಲನೇ ಬಾರಿಗೆ ನ್ಯಾಯಾಲಯದಲ್ಲಿ ಹೇಳಿದ್ದು, ಸದರಿ ವಿಷಯವನ್ನು ಪೋಲಿಸರ ಮುಂದೆ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನನ್ನ ಕೊರಳಿನಲ್ಲಿದ ಬಂಗಾರವನ್ನು ತೆಗೆದುಕೊಂಡು ಹೋಗಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ಆರೋಪಿತರು ನಮ್ಮ ಮನೆಯ ಹತ್ತಿರವಾಗಲೀ ಚಾಸಾಃ 7 ರವರ ಮನೆಯ ಹತ್ತಿರವಾಗಲೀ ಬಂದು ಚಾಸಾಃ 7 ರವರಿಗಾಗಲೀ, ನನಗಾಗಲೀ ಕೈಗಳಿಂದ, ಬಡಿಗೆಗಳಿಂದ ಬಡೆದು ಅವಾಚ್ಯ ಶಬ್ದಗಳಿಂದ ಬೈದು ಜಾತಿ ನಿಂದನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 2, 5, 10 ಮತ್ತು 13 ನೇ ಆರೋಪಿತರು ಸೇರಿ ನನಗೆ ಮತ್ತು ನನ್ನ ಮಕ್ಕಳನ್ನು ಕೊಲೆ ಮಾಡುತ್ತೇವೆ

ಎಂದು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪಿರ್ಯಾದಿಯಲ್ಲಿ ಹೇಳಿದಂತೆ ಹಾಗೂ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆ ನಡೆಯದಿದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: 1 ರಿಂದ 3, ನೇ ಆರೋಪಿತರ ಪರ ಶ್ರಿ.ಆರ್.ಸಿ.ಪಿ ವಕೀಲರಿಂದ,**

ಈ ಪ್ರಕರಣದ 1 ನೇ ಆರೋಪಿ ನನಗೆ ಸಂಬಂಧಿಕ ಆಗಬೇಕೆಂದರೆ ಸರಿ. ಚಾಸಾಃ 7 ಮತ್ತು ಚಾಸಾಃ 10 ನನ್ನ ಸಂಬಂಧಿಕರು ಎಂದರೆ ಸರಿ. ಚಾಸಾಃ 7 ರವರು ಕೂಲಿ ಕೆಲಸ ಮಾಡುತ್ತಾರೆ. ಚಾಸಾಃ 7 ಹಾಗೂ ಈ ಪ್ರಕರಣದ 1 ರಿಂದ 3 ನೇ ಆರೋಪಿತರು ಜೊತೆಯಾಗಿ ಕೆಲಸಕ್ಕೆ ಹೋಗುತ್ತಿದ್ದರು ಎಂದರೆ ಸರಿ. ನಾನು ಚಾಸಾಃ 7 ರವರನ್ನು ಊಟಕ್ಕೆ ಕರೆಯಲು ಆತನ ಮನೆಗೆ ಹೋದಾಗ ಈ ಪ್ರಕರಣದ 1 ರಿಂದ 3 ನೇ ಆರೋಪಿತರು ಚಾಸಾಃ7 ರವರ ಮನೆಯ ಹತ್ತಿರ ಬಂದಿರಲಿಲ್ಲ ಮತ್ತು ಅವರು ನನ್ನ ಮೇಲೆ ಹಾಗೂ ಚಾಸಾಃ 7 ರವರ ಮೇಲೆ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

2. ಈ ಪ್ರಕರಣದ 1 ರಿಂದ 3 ನೇ ಆರೋಪಿತರು ಸೇರಿ ಚಾಸಾಃ 7 ರವರಿಗೆ ಕೈಯಿಂದ ಹೊಡೆಬಡೆಯುತ್ತಿದ್ದರು ಆಗ ನಾನು ಅವರಿಗೆ ಏಕೆ ಹೊಡೆಯುತ್ತಿದ್ದಿರಿ ಅವರ ಮನೆಯಲ್ಲಿ ಯಾರು ಇಲ್ಲ ಎಂದು ಕೇಳಿದಾಗ ಸದರಿಯವರು ಚಿದಾನಂದ ಇತನು ನಮ್ಮನ್ನು ಕೂಲಿ ಕೆಲಸಕ್ಕೆ ಕರೆದುಕೊಂಡು ಹೋಗದೇ ಬಿಟ್ಟು ಹೋಗಿರುತ್ತಾನೆ ಆದರಿಂದ ಆತನನ್ನು ಹೊಡೆಯುತ್ತಿರುವುದಾಗಿ ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ 1 ರಿಂದ 3 ನೇ ಆರೋಪಿತರು ಚಿದಾನಂದ ಇತನ ಮೇಲೆ ಹಲ್ಲೆ ಮಾಡಿದ್ದರಿಂದ ಚಿದಾನಂದ ಇತನು ಪ್ರಜ್ಞೆ ತಪ್ಪಿ ಬಿದ್ದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. 1 ನೇ ಆರೋಪಿಯು ನನಗೆ ನೀನು ಏನು ಕೇಳತಿ ನಾನು ಹೊಡೆಯುವನು ಅಂತಾರ ಹೇಳಿ ನೀನೇನ ಬಿಡಸಾಕಿ ಅಂತಾ ಹೇಳಿ ನನಗೆ ಕೈಯಿಂದ ಎಡಗಡೆ ಕಪಾಳಕ್ಕೆ ಹೊಡೆದನು ನಾನು ಚಿರಾಡಲು ಅಲ್ಲಿಗೆ ಚಾಸಾಃ 8 ಮತ್ತು ಚಾಸಾಃ 9 ರವರು ಬಂದು ಏಕೆ ಇವರನ್ನು ಬಡಿಯುತ್ತಿದ್ದಿರಾ ಅಂತಾ ಹೇಳಿ ಸದರಿಯವರು ಜಗಳ ಬಿಡಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಧೀಶರ ಮುಂದೆ ನಿಪಿಃ5 ರಂತೆ ಪೋಲಿಸರು ಹೇಳಿದಂತೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳಿ ತೋರಿಸಿದಂತೆ ಚಾಸಾಃ 2 ಮತ್ತು ಚಾಸಾಃ 3 ರವರ ಸಮಕ್ಷಮ ಪೋಲಿಸರು ಪಂಚನಾಮೆ ಮಾಡಿ ನಿಪಿಃ 2 ರಿಂದ 4 ರಂತೆ ಪೋಟೋಗಳನ್ನು ತೆಗೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆ ಆದ ಎರಡು ದಿನಗಳ ನಂತರ ಮತ್ತೆ ಪೋಲಿಸರು ಘಟನಾ ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿ ಎಮ್.ಓ .1 ನ್ನು ಅಮಾನತ್ತುಪಡಿಸಿಕೊಂಡು ಹೋಗಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ಈ ಪ್ರಕರಣದ 1 ರಿಂದ 3 ನೇ ಆರೋಪಿತರು ಚಿದಾನಂದ ಇತನನ್ನು ಹೊಡೆಯುತ್ತಿದ್ದಾಗ ನಾನು ಹೊಡೆಯಬೇಡಿ ಅಂತಾ ತಿಳಿಸಲು ಹೋದಾಗ 3 ಜನ ಆರೋಪಿತರು ಸೇರಿ ನನ್ನ ಸೀರೆಯನ್ನು ಹಿಡಿದು ಎಳೆದಾಡಿ, ಜಗ್ಗಾಡಿ ನನ್ನನ್ನು ಸಹ ಹೊಡೆಬಡೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಮಾರನೇ ದಿನ ನಮ್ಮ ಮನೆಯ ಹತ್ತಿರ ಬಂದು ನನಗೆ ಹೊಡೆಬಡೆ ಮಾಡುವ ಸುದ್ದಿ ಕೇಳಿ ನನ್ನನ್ನು ಆರೋಪಿತರಿಂದ ಬಿಡಿಸಿಕೊಳ್ಳಲು ನನ್ನ ತಂಗಿ ಪಾರ್ವತಿ ಬಂದಿದ್ದು, ಅವಳಿಗೂ ಸಹ ಆರೋಪಿತರು ಕೈಗಳಿಂದ ಹೊಡೆಬಡೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಈ ಪ್ರಕರಣ ಆರೋಪಿತರಾದ ಆನಂದ ನರಸಾಯಿ , ಪರು ಬಡಚಿ, ಅನೀಲ ಭಗವಂತ ನರಸಾಯಿ ಮತ್ತು ಗುಂಡು ನರಸಾಯಿ ಇವರೂ ಸಹ ನಮ್ಮ ಮನೆಯೊಳಗೆ ಹೊಕ್ಕು ನನಗೆ ಕೈಯಿಂದ ಹೊಡೆಬಡೆ ಮಾಡುವಾಗ ಘಟನೆ ಸಂಗತಿ ಕೇಳಿ ಗೊತ್ತಾಗಿ ಬಿಡಿಸಲು ನನ್ನ ಮೈದು ಚಿದಾನಂದ ಮಗದುಮ ಬಂದಿದ್ದು ಇವನಿಗೂ ಸಹ ಕೈಯಿಂದ ಹೊಡೆಬಡೆ ಮಾಡಿ ಅವಾಚ್ಯ ಶಬ್ದಗಳಿಂದ

ಬೈದು ಅದಲ್ಲದೇ ಪಾರ್ವತಿ ಮಗದುಮ ಇವಳಿಗೂ ಸಹ ಕೈಯಿಂದ ಹೊಡೆಬಡೆ ಮಾಡಿ ನಿಮಗೆ ಜೀವ ಸಹಿತ ಬಿಡುವುದಿಲ್ಲ ಅಂತಾ ಜೀವದ ಧಮಕಿ ಹಾಕಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ಅಲ್ಲೇ ಇದ್ದಂತಹ ಅಕ್ಕಪಕ್ಕದ ಮನೆಯವರಾದಂತಹ ಚಾಸಾಃ 4 ರಿಂದ ಚಾಸಾಃ 6 ರವರು ಬಂದು ಜಗಳ ಬಿಡಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ಸದರಿ ಘಟನೆಯಲ್ಲಿ ಆರೋಪಿಯಾದಂತಹ ಶಿವಾನಂದ ಮಾಕನ್ನವರ ಇವನು ನನ್ನ ಕೊರಳಿನಲ್ಲಿದ್ದ ಒಂದು ತೊಲೆ ಬಂಗಾರದ ಆಭರಣವನ್ನು ಕಿತ್ತುಕೊಂಡು ಹೋಗಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದಲ್ಲಿ ನೀವು ಸಾಕ್ಷಿ ಹೇಳಬೇಡಿ ಹೇಳಿದರೆ ನಿನ್ನನ್ನು ಹಾಗೂ ನೀನಗಿರುವ ಎರಡು ಮಕ್ಕಳನ್ನು ಸಹ ಕೊಲ್ಲುವುದಾಗಿ ಶಿವಾನಂದ ಮಾಕನ್ನವರ, ಪರು ಬಡಚಿ, ಮಹಾವೀರ ನರಸಾಯಿ, ರೂಪೇಶ ನಾಯಿಕ ಜೀವ ಬೆದರಿಕೆ ಹಾಕಿದ್ದು ಮತ್ತು ಕುಮಾರ ಮಾಕನ್ನ ಎನ್ನುವವನು ನನ್ನ ಮಗನಾದ ಸೂರಜ ಇತನ ಫೋನಗೆ ಕರೆ ಮಾಡಿ ನಿಮ್ಮ ಮಮ್ಮಿಗೆ ಕೇಸನ್ನು ವಾಪಸ್ ತೆಗೆದುಕೊಳ್ಳು ಅಂತಾ ಹೇಳು ಅಂತಾ ಹೇಳಿದ್ದು, ಆಗ ನನ್ನ ಮಗ ಸದರಿ ವಿಷಯ ನನಗೆ ಗೊತ್ತಿಲ್ಲ ನೀವು ನಮ್ಮ ಮಮ್ಮಿಯನ್ನೇ ಕೇಳಿ ಅಂತಾ ಹೇಳಿದ್ದಾಗಿ ನನ್ನ ಮುಂದೆ ನನ್ನ ಮಗ ಸೂರಜ ಹೇಳಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಮುಂಚೆ ದಿಃ 03.09.2024 ರಂದು ಈ ನ್ಯಾಯಾಲಯಕ್ಕೆ ಬಂದು ವಾಪಸ್ ಹೋದ ನಂತರ ದಿಃ 09.09.2024 ರಂದು ನನ್ನ ಮಗನಾದ ಶಿವಕುಮಾರ ವಸಂತ ನಾಯಕನ ಬೈಕಗೆ ಎರಡು ಮೋಟರಸೈಕಲ ಮೇಲೆ 6 ಜನರಾದ ಶಿವಾನಂದ ಮಾಕನ್ನವರ, ಕುಮಾರ ಮಾಕನ್ನವರ, ಪರು ಬಡಚಿ, ರೂಪೇಶ ನಾಯಿಕ, ಮಹಾವೀರ ನರಸಾಯಿ, ಅನೀಲ ನರಸಾಯಿ ರವರು ಬೆನ್ನಹತ್ತಿ ನನ್ನ ಮಗನಿಗೆ ನಿಮ್ಮ ಮಮ್ಮಿಗೆ ವಾಪಸ್ ತೆಗೆದುಕೊಳ್ಳು ಅಂತಾ ಹೇಳಿ ಧಮಕಿ ಹಾಕಿದ್ದಾಗಿ ಹೇಳಿದ್ದು ಅದೇ ದಿನ ರಾತ್ರಿ ನಾನು ಮತ್ತು ನನ್ನ ಮಗ ಕಾಗವಾಡ ಪೋಲಿಸ ಠಾಣೆಗೆ ದೂರು ಕೊಡಲು ಹೋಗಿದ್ದು, ಆಗ ಅಲ್ಲಿದ್ದಂತಹ ಪೋಲಿಸರು ನಾಳೆ ಮುಂಜಾನೆ ಬಂದು ನೀವು ದೂರು ಕೊಡಿ ಅಂತಾ ಹೇಳಿ ಕಳುಹಿಸಿದ್ದು, ಅದೇ ರೀತಿ ಮಾರನೇ

ದಿನ ಸಹ ಹೋಗಿದ್ದು, ಆ ದಿನ ಸಹ ದೂರು ತೆಗೆದುಕೊಳ್ಳಲಿಲ್ಲ, ಬೆಳಗಾವಿಯಲ್ಲಿರುವಂತಹ ಡಿ.ವೈ.ಎಸ್.ಪಿ ಕಚೇರಿಗೆ ಬಂದು ದೂರು ನೀಡಲು ಹೋಗಿದ್ದು ಪೋಲಿಸರು ನಮ್ಮ ದೂರನ್ನು ತೆಗೆದುಕೊಳ್ಳುತ್ತಿಲ್ಲ ಅಂತಾ ಹೇಳಿದ ನಂತರ ಸದರಿಯವರು ಕಾಗವಾಡ ಪೋಲಿಸರಿಗೆ ಪೋನ ಮಾಡಿ ಹೇಳಿದ ಮಾರನೇ ದಿವಸ ಪೋಲಿಸರು ನಮ್ಮಿಂದ ದೂರನ್ನು ಸ್ವೀಕಾರ ಮಾಡಿ 6 ಜನರ ವಿರುದ್ಧ FIR ನ್ನು ದಾಖಲು ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ಯಾವುದೇ ಜಗಳ ಆಗದೇ ಇದ್ದರೂ ಸಹ ಮಹಾದೇವಿ ಮಾಕಣ್ಣವರ ಚಿತಾವಣಿಯಿಂದ ಒಂದು ಸುಳ್ಳು ದೂರನ್ನು ಸಲ್ಲಿಸಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಚೆನ್ನಪ್ಪ ಗೌಡ)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.